ಎಲ್ಲೆಲ್ಲಿಂದಲೊ ಕಲಿತು ಬೆಳೆದು ಬಂದಿದೆ. ಪ್ರಾಕೃತ, ಸಂಸ್ಕೃತ, ತಮಿಳು, ಉರ್ದು, ಪರ್ಶಿಯನ್, ಶಾಬ್ದಿಕ, ಅಶಾಬ್ದಿಕ ಇತ್ಯಾದಿ. ಹೀಗಾಗಿಯೇ ಕನ್ನಡ ಸೃಜನಶೀಲತೆಗೆ ಒಂದು ಉಜ್ವಲತೆ ಒದಗಿದೆ. ಹೀಗಾಗಿ, ಶುದ್ಧ ಕನ್ನಡ ಕಾವ್ಯಮೀಮಾಂಸೆ ಅನ್ನುವಂಥದ್ದು ಇಡೀ ಕನ್ನಡದ ಸೃಜನಶೀಲತೆಗೆ ಒಗ್ಗುವುದಿಲ್ಲ. ತಮಿಳು ಕಾವ್ಯಮೀಮಾಂಸೆಯನ್ನು ಅನೇಕರು ಹೊಗಳುತ್ತಾರೆ. ತಮಿಳಿನ 'ತೋಲ್ಕಾಪ್ಪಿಯಂ' ಆಗಲಿ ಅಥವಾ ಸಂಗಮ ಸಾಹಿತ್ಯವಾಗಲಿ ಅವುಗಳಲ್ಲಿರುವಂಥ ಮೇಜರ್ ಸಿಂಬಾಲಿಸಮ್ ಅಂದರೆ, ಅಳತೆ ಮಾಡಿ ತರಲಾದ ಸಾಂಕೇತಿಕತೆ. ನಮ್ಮ ಕನ್ನಡದ ಅಭಿವ್ಯಕ್ತಿ ಮೊಟ್ಟಮೊದಲ ಬಾರಿಗೆ ಪಂಪನಲ್ಲಿ ಹೀಗೆ ಮೇಜರ್ ಆಗಿ ಬಂದಿರುವಂಥದ್ದಲ್ಲ. ಹೊಸ ಮೀಮಾಂಸೆಯನ್ನು ಖಂಡಿತ ಹುಡುಕಬೇಕು. ಆದರೆ, ಸುಮ್ಮನೆ ಗ್ಲೋರಿಫೈ ಮಾಡಬಾರದು. ಹಾಗೆ ಶುದ್ಧ ದೇಸೀ ಮೀಮಾಂಸೆ ಅಂತೆಲ್ಲ ನನಗೆ ಮಾತಾಡ್ಲಿಕ್ಕಾಗಲ್ಲ. ಈಗಲೂ ನನಗೊಂದು ಪ್ರಶ್ನೆಯಿದೆ. ದೊಡ್ಡ ಕವಿಗೆ ಸೀಮಿತ ಲೋಕ ಸಾಕಾಗುವುದಿಲ್ಲ. ಕನ್ನಡದ ಪುಣ್ಯ, ಪಂಪನಿಗೂ ಇದು ಸಾಕಾಗಲಿಲ್ಲ. ಆತ ಎಲ್ಲೆಲ್ಲೊ ನೋಡಿದ. ಶುದ್ಧ ಕನ್ನಡವೆಂದು ಹೇಳುವ ಕವಿ ಅಂಡಯ್ಯ ಅಂಥ ಮಹತ್ವದ ಸಾಧನೆ ಮಾಡ್ಲಿಕ್ಕಾಗಲಿಲ್ಲ. ನೀವು ಬೇಕಾದರೆ ಸಾಂಸ್ಕೃತಿಕವಾಗಿ ಅವನನ್ನು ವ್ಯಾಖ್ಯಾನ ಮಾಡಿ. ಏನ್ ಮಾಡಿದ್ದಾನವನು? ಬರೀ ತದ್ಭವಗಳನ್ನ ಸೃಷ್ಟಿ ಮಾಡ್ತಾ ಕೂತಿದ್ದಾನೆ. ನಾವು ನಮ್ಮ ಸೃಜನಶೀಲತೆಯನ್ನು ಸೀಮಿತ ಮಾಡಿಕೊಂಡ್ರೆ ಹೆಚ್ಚಿನದನ್ನ ಪಡೀಲಿಕ್ಕೆ ಆಗೋದಿಲ್ಲ.

◆ **ಕವಿರಾಜಮಾರ್ಗದಲ್ಲೆ ಕನ್ನಡ ಕಾವ್ಯಮೀಮಾಂಸೆಯ ಖಚಿತ ನೆಲೆಗಳಿವೆಯಲ್ಲವೆ? ಕವಿರಾಜಮಾರ್ಗ ಕುರಿತು ಕನ್ನಡದಲ್ಲಿ ನಡೆದ ವಿಭಿನ್ನ ಓದುಗಳಲ್ಲಿ ಅನೇಕ ಕೊರತೆಗಳಿವೆ ಅನ್ನೋದು ನಿಮ್ಮ ಇನ್ನೊಂದು ವಾದವಾಗಿತ್ತು? ಇದನ್ನು ಕೊಂಚ ವಿವರಿಸಿ.**

ಕೆ.ವಿ. ಸುಬ್ಬಣ್ಣ ಅವರು ದೊಡ್ಡ ವಿದ್ವಾಂಸರು. ನಾನು ಮಹಾಸತಿ ಆಚರಣೆ ಕುರಿತು ಸಂಶೋಧನೆ ಮಾಡುವಾಗ ಮನೆಯಲ್ಲಿಟ್ಟುಕೊಂಡು ಊಟ ಕೊಟ್ಟು ತುಂಬ ಪ್ರೀತಿಯಿಂದ ನೋಡಿಕೊಂಡಿದ್ದರು. ಅವರ ಚರ್ಚೆಗಳಿಂದ ನಾನು ಲಾಭ ಪಡೆದಿರುವೆ. 'ಕವಿರಾಜಮಾರ್ಗ'ಕ್ಕೆ ಸಂಬಂಧಿಸಿದಂತೆ ಸುಬ್ಬಣ್ಣನವರದು ಒಂದು ಪುಸ್ತಕ ಇದೆ. ಕೆಲವೆಡೆ ಮಾತನ್ನೂ ಆಡಿದ್ದಾರೆ. ಅದರ ಸಾರ ಹೀಗಿದೆ; 'ಕವಿರಾಜಮಾರ್ಗ ವಸುಧೆ ಮತ್ತು ಕನ್ನಡಕ್ಕೆ ಕಲ್ಪಿಸಿದ ಸಂಕೀರ್ಣ ಸಂಬಂಧ. ಸಂಸ್ಕೃತ ಕನ್ನಡಗಳ ಮಧ್ಯೆ, ಮಾರ್ಗ ಮತ್ತು ದೇಸಿಗಳ ಮಧ್ಯೆ, ಧರ್ಮ ಮತ್ತು ಮಾನವ ಧರ್ಮದ ಮಧ್ಯೆ ಒಂದು ಸೇತುವೆಯನ್ನು ಕಲ್ಪಿಸುತ್ತದೆ.' ಅಂದರೆ, ಯಾವುದನ್ನು ನಾವು ವಿಶ್ವಾತ್ಮಕ ಅಂತೀವಿ, ಅಂದರೆ ಶೆಲ್ಡನ್ ಪೊಲಾಕ್ ಹೇಳಿದ ವಾದವೇನಿದೆ ಆ ವಾದವನ್ನಿವರು ಹೆಚ್ಚೂ ಕಡಿಮೆ ಅನುಸರಿಸಿದ್ದಾರೆ. ಬೇಸಿಕಲಿ ಶೆಲ್ಡನ್ ಪೊಲಾಕ್ ಅವರ ಈ ಕಲ್ಪನೆ ಒಂದು ಕಲೋನೈಸ್ಡ್ ಮೈಂಡ್ ಕಟ್ಟಿದ ಕಲ್ಪನೆ. ಯಾವಾಗಲೂ ಕೆಳಗಿರೋದು ಮೇಲಿರೋದರ ಹತ್ತಿರಕ್ಕೆ ಹೋಗಲು ಯತ್ನಿಸ್ತದೆ ಅಂತ ಭಾವಿಸಿರೊ ಕಲ್ಪನೆಯಿದು. ಆದರೆ, 'ಕವಿರಾಜಮಾರ್ಗ'ಕ್ಕಿರುವ ಆತ್ಮಪ್ರತ್ಯಯ, ಕ್ರಿಯೇಟಿವಿಟಿ ಬಹಳ ಭಿನ್ನವಾದುದು. ಪೊಲಾಕ್ ಮೂಲಭೂತವಾಗಿ ಓರಿಯೆಂಟಲ್ ಆದ ಸ್ಕಾಲರ್. ಬಹಳ ದೊಡ್ಡ ವಿದ್ವಾಂಸರು. ಅದರಲ್ಲೇನೂ ಅನುಮಾನ ಇಲ್ಲ. ಆದರೆ, ಅವರ ತಾತ್ವಿಕ ವಾದಗಳು ನಮ್ಮ ಆಧುನಿಕ ಪೂರ್ವ ಕಾವ್ಯ ಓದಲಿಕ್ಕೆ ಅಡ್ಡಿಯಾದವು. ಯಾಕೆಂದರೆ, ಅವರ ಈ ವಿಶ್ವಾತ್ಮಕವಾದ ತತ್ವವನ್ನು ನಾವು ಮತ್ತೆಮತ್ತೆ ಆರೋಪಿಸಿಕೊಂಡು ಮಾತಾಡ್ತಾ ಇದ್ದೀವಿ. ಅಂದರೆ, ಏನೋ ಒಂದು ವಿಶ್ವಾತ್ಮಕತೆ ನಮ್ಮ ಕಾವ್ಯದಲ್ಲಿ ಇದ್ರೆ ನಮ್ಮ ಕ್ರಿಯೇಟಿವಿಟಿ ದೊಡ್ಡದು ಅನ್ನೋ ಭ್ರಮೆ ನಮ್ಮ ನಡುವೆ ಸೃಷ್ಟಿಯಾಗಿದೆ. ಇಂಗ್ಲಿಷ್ ಓದಿದೋನು ಬಹಳ ದೊಡ್ಡ ಕ್ರಿಯೇಟಿವ್ ರೈಟರ್ ಆಗಬಲ್ಲ, ಬಹಳ ದೊಡ್ಡ ಕ್ರಿಟಿಕ್ ಆಗಬಲ್ಲ ಅನ್ನೋ ಒಂದು ಭ್ರಮೆಯ ಹಾಗೆ. ಸುಬ್ಬಣ್ಣನವರ ಆ ಮಾತು ಪೊಲಾಕ್ ಅವರ ಮಾತನ್ನು ಹೋಲುವ